10. ಶಿವಮೊಗ್ಗ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ಸತ್ತ ಬಡರೈತ ಕುಟುಂಬದವರಿಗೆ ಪರಿಹಾರ ನೀಡುವುದರ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ಶಿವಮೊಗ್ಗ ತಾಲ್ಲೂಕಿನಲ್ಲಿ ಪದೇ ಪದೇ ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆ ಹಾಳಾಗುತ್ತಿರುವುದಾಗಿ ಅಂದರೆ ಹೆಂದಿ, ಕಾಡು ಕೋಣ, ಮತ್ತು ಕಾಡಾನೆಯ ಹಾವಳಿಯಿಂದ ಬೆಳೆ ನಾಶವಾಗುವುದರ ಜೊತೆಗೆ ಜನರಿಗೆ ಹಳ್ಳಿಗಾಡು ಪ್ರದೇಶದಲ್ಲಿ ಬದುಕುವುದೇ ಕಷ್ಟವಾಗಿದೆ. ಉದಾಹರಣೆಗೆ ಶಿವಮೊಗ್ಗ ತಾಲ್ಲೂಕು ಗಾಡಿಕೊಪ್ಪದ ರೈತನನ್ನು ಮರದಾಡಿಯಲ್ಲಿ ಕಾಡಾನೆ ಕೊಂದು ಹಾಕಿದೆ, ಈವರೆಗೂ ಅರಣ್ಯ ಇಲಾಖೆಯಿಂದ ಯಾವುದೇ ಪರಿಹಾರ ಕೊಟ್ಟಿರುವುದಿಲ್ಲ. ಈಗಲೂ ರೈತರು ಕಾಡಾನೆಯಿಂದ ಭಯ ಭೀತರಾಗಿದ್ದಾರೆ. ಇಲಾಖೆಯವರು ಸೂಕ್ತ ಕ್ರಮ ತೆಗೆದುಕೊಂಡು ರೈತರಿಗೆ ಆಗುತ್ತಿರುವ ಹಿಂಸೆಯನ್ನು ತಡೆಗಟ್ಟಬೇಕೆಂದು ಸತ್ತ ಬಡ ರೈತರ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ನಿನ್ನೆ ದಿವಸ ಮತ್ತೊಬ್ಬ ರೈತನನ್ನು ಆನೆ ಕೊಂದು ಹಾಕಿದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ತಾಲ್ಲೂಕಿನಲ್ಲಿ ಬೆಳೆ ಹಾನಿಯಾದ ಪಕ್ಷದಲ್ಲಿ ಸರ್ಕಾರದ ನಿಯಮದಂತೆ ಸಂಬಂಧಪಟ್ಟ ರೈತರ ಬೆಳೆಗೆ ಸೂಕ್ತ ಪರಿಹಾರವನ್ನು ಕೊಡಲಾಗಿದೆ. ಅಲ್ಲದೆ ಈ ಬಗ್ಗೆ ಹಾವಳಿಯನ್ನು ತಪ್ಪಿಸುವಲ್ಲಿ ಕೂಡ ಇಲಾಖಾ ಅಧಿಕಾರಿಗಳು ಕ್ರಮ ತೆಗೆದುಕೊಂಡಿರುತ್ತಾರೆ. ಶಿವಮೊಗ್ಗ ತಾಲ್ಲೂಕಿನ ಗಾಡಿ ಕೊಪ್ಪದ ನಿವಾಸಿಯು ಹಾಯ್ ಹೊಳೆ ಮನ್ನಾ ಜಂಗಲಿಗೆ ಅರಣ್ಯ ಸಂಪತ್ತನ್ನು ಕಳ್ಳತನ ಮಾಡಲು ಹೋಗಿದ್ದ ಸಮಯದಲ್ಲಿ ಕಾಡಾನೆಯು ತುಳಿತಕ್ಕೆ ಸಿಕ್ಕಿ ಮೃತ ಪಟ್ಟಿರುವುದು ನಿಜವಲ್ಲ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗರವರು ಈ ಸಾವಿನ ಬಗ್ಗೆ ವರದಿಯಾದ ಕೂಡಲೇ ಸೂಕ್ತ ತನಿಖೆ ನಡೆಸಿ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗರವರಿಗೆ ಈ ಮೃತಪಟ್ಟವರು ಹಾಯ್ ಹೊಳೆ ಮನ್ನಾ ಜಂಗಲಿಯಿಂದ ಮರ ಕಳ್ಳಸಾಗಾಣಿಕೆಗೆ ಹೋಗಿದ್ದು ಕಾಡಿನಲ್ಲಿ ಆನೆಯ ತುಳಿತಕ್ಕೆ ಸಿಕ್ಕಿ ಮೃತಪಟ್ಟಿದ್ದಾನೆ. ಇಂತಹ ಪ್ರಸಂಗದಲ್ಲಿ ಪರಿಹಾರ ಕೊಡಲು ಬರುವುದಿಲ್ಲ ಪೂರ್ವದಲ್ಲಿ ಯಾರೂ ಕೂಡ ಈ ರೀತಿ ಯಾವುದೇ ಕಳ್ಳಸಾಗಾಣಿಕೆದಾರರು ಮನ್ನಾ ಜಂಗಲಿಯಲ್ಲಿ ಅರಣ್ಯ ಸಂಪತ್ತು ಲೂಟಿ ಮಾಡುತ್ತಿರುವ ಸಮಯದಲ್ಲಿ ಕಾಡಾನೆ ಅಥವಾ ಇನ್ನಾವ ಕಾಡು ಪ್ರಾಣಿಗಳ ಆವೇಶಕ್ಕೆ ಸಿಕ್ಕಿ ಸತ್ತಿದ್ದರೆ ಅಂತಹ ವ್ಯಕ್ತಿಗಳಿಗೆ ಪರಿಹಾರ ನೀಡಿರುವುದಿಲ್ಲ. ಅಲ್ಲಿ ಮನುಷ್ಯ ಪ್ರಾಣಿಗಳು ಜೀವಿಸಬೇಕಾದ ಜಾಗದಲ್ಲಿ ಅಕ್ರಮ ಸಾಗಾಣಿಕೆದಾರರು ಮಧ್ಯ ಪ್ರವೇಶಿಸಿ ಅರಣ್ಯ ಸಂಪತ್ತನ್ನು ಲೂಟಿ ಮಾಡುತ್ತಿರುವಲ್ಲಿ ಯಾವುದೇ ಕಾಡು ಪ್ರಾಣಿಗಳ ಎದುರಿಗೆ ಸಿಕ್ಕಿ ಸತ್ತಲ್ಲಿ ಅಥವಾ ಗಾಯಗೊಂಡಲ್ಲಿ ಪರಿಹಾರ ಕೊಡಲಾಗುವುದಿಲ್ಲ.

(11) ಮೈಸೂರಿನ ದಕ್ಷಿಣ ವಿಭಾಗದ ಪೋಲೀಸ್ ಠಾಣೆಯಿಂದ ಅಲ್ಪಸಂಖ್ಯಾತರಿಗೆ ನ್ಯಾಯ ದೊರಕದೆ ಇರುವುದರ ಬಗ್ಗೆ

SMT. MUKHTARUNNISA.—Sir, justice is not meted out to Harijans. Minorities, and poor and down-trodden people in the South Zone Police Station in Mysore Taluk. The members of the Akhila Karnataka Sevadala Mysore have represented to the Deputy Commissioner, Mysore regarding this treatment of the South Zone Police Station authorities and as per his suggestion they met the S P of Mysore and submitted a memorandum stating about the injustice done to public. They have also stated in the memorandum the assaul on Jamina Begum by 9 members of Gousia Nagar attempted raping a Harijan Muramma of Hadjana Village by six members e.c. and the B' report issued by the said Police Station authorities. All these things have been reported by Prajavani. But no action

was taken so far. The sevadal authorities have decided to fight out this sort of treatment. Hence, I urge the Government to make an enquiry against the above Police authorities and take action to stop the unhappy incident which is going to happen in Mysore.

ಶ್ರೀ ಎ. ಲಕ್ಷ್ಮೀಸಾಗರ್‌ (ಗೃಹ ಮಂತ್ರಿಗಳ ಪರವಾಗಿ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸೂಚಿಸಿರುವಂತೆ ಮೈಸೂರು ದಕ್ಷಿಣ ವಿಭಾಗದ ಪೋಲೀಸರು ಹರಿಜನರು ಮತ್ತು ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಟ್ಟಿಲ್ಲವೆಂದು ಹೇಳುವ ದೂರನ್ನು ಈಗಾಗಲೇ ಕೂಲಂಕುಷವಾಗಿ ಸ್ಥಳೀಯ ಜಿಲ್ಲಾ ಪೋಲೀಸ್ ಅಧಿಕಾರಿಗಳು ಪರಿಶೀಲಿಸಿ ಅದು ಸತ್ಯಕ್ಕೆ ದೂರವಾದುದೆಂದು ವರದಿಯನ್ನು ಕಳುಹಿಸಿದ್ದಾರೆ.

೨) ಮಾನ್ಯ ಸದಸ್ಯರು ಸೂಚಿಸಿರುವಂತೆ ಅಖಿಲ ಕರ್ನಾಟಕ ಸೇವಾದಳ ಹೆಸರಿನ ಸಂಸ್ಥೆಯ ಶಾಮ ಎಂಬುವವರು ಮತ್ತು ಅವರ ಅನುಯಾಯಿಗಳು ಮೈಸೂರು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಿಗೆ ಹರಿಜನರು ಮತ್ತು ಅಲ್ಪಸಂಖ್ಯಾತರ ಪರವಾಗಿ ಮನವಿಯೊಂದನ್ನು ಸಲ್ಲಿಸಿದ್ದು ಅದನ್ನು ಪರಿಶೀಲಿಸಲಾಗಿ ಇದರಲ್ಲಿ ಸ್ಥಳೀಯ ಪೋಲೀಸರ ಮೇಲೆ ಮಾಡಿದ ಅಪಾದನೆಗಳು ಸಾಬೀತಾಗಿರುವುದಿಲ್ಲ.

೩) ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಪ್ರಸ್ತಾಪಿಸಿರುವ ಎರಡು ನಿರ್ದಿಷ್ಟ ಘಟನೆಗಳ ಬಗ್ಗೆ ವಿವರಗಳು ಇಂತಿವೆ.

ಅ) ಜರೀನಾ ಬೇಗಮ್ ಅವರ ದೂರು.—೫-೯-೧೯೮೭ ರಂದು ಶ್ರೀಮತಿ ಜರೀನಾ ಬೇಗಮ್ ಅವರ ಗಂಡ ಗುಲಾಮ್ ಮಹಿದ್ ಖಾನ್‌ರವರಿಗೂ ಮತ್ತು ರಿಯಾಜ್ ಮತ್ತು ಇತರ ಎಂಟು ಜನರಿಗೂ ವೀಡಿಯೋ ಪ್ರದರ್ಶನದ ಬಗ್ಗೆ ಒಂದು ಸಣ್ಣ ಜಗಳವಾಗಿ ಇದರ ಬಗ್ಗೆ ಒಂದು ದೂರನ್ನು ಪೋಲೀಸ್ ಠಾಣೆಗೆ ಕೊಡಲಾಗಿತ್ತು. ಇದೊಂದು ಅಸಂಜ್ಞೇಯ (ನಾನ್ ಕಾಗ್ನಿಸಬಲ್) ಅಪರಾಧಕ್ಕೆ ಸಂಬಂಧಿಸಿದ್ದುದರಿಂದ ಪೋಲೀಸರು ಎರಡೂ ಕಡೆಯವರ ಅರ್ಜಿಯನ್ನು ಪರಿಶೀಲಿಸಿ ಅವರಿಗೆ ಸೂಕ್ತ ತಿಳಿವಳಿಕೆಯನ್ನು ಕೊಟ್ಟು ಕಳುಹಿಸಿದರು, ಇದಾದ ಮೇಲೆ ೨೬-೯-೧೯೮೭ ರಂದು ಶ್ರೀಮತಿ ಜರೀನಾ ಬೇಗಮ್ ರವರು ಇನ್ನೊಂದು ದೂರನ್ನು ಕೊಟ್ಟು ರಿಯಾಜ್ ಮತ್ತು ಎಂಟು ಜನರು ತನ್ನ ಮನೆಗೆ ಬಂದು ಬೈಯ್ದು ಹಲ್ಲೆ ಮಾಡಿದರು ಎಂದು ದೂರಿದ್ದರು. ಈ ದೂರಿನ ಮೇರೆಗೆ ಅಪರಾಧ ಕ್ರಮ ಸಂಖ್ಯೆ ೨೫೬/೮೭ ಇದನ್ನು ಭಾರತೀಯ ದಂಡ ಸಂಹಿತೆ ೧೪೩, ೩೨೪ರ ಪ್ರಕಾರ ದಾಖಲು ಮಾಡಿಕೊಂಡು ಸೂಕ್ತ ರೀತಿಯ ತಪಾಸಣೆಯನ್ನು ಮಾಡಲಾಯಿತು. ವೈದ್ಯಕೀಯ ಪ್ರಮಾಣ ಪತ್ರ ಮತ್ತು ದೊರೆತ ಸಾಕ್ಷ್ಯಗಳ ಪ್ರಕಾರ ಅಪರಾಧವು ಸಾಬೀತಾಗದಿದ್ದುದರಿಂದ ೧೧-೨-೧೯೮೮ ರಂದು ಈ ಪ್ರಕರಣವನ್ನು "ಬಿ" ಅಂತಿಮ ವರದಿಯನ್ನು ಕೊಟ್ಟು ಮುಕ್ತಾಯಗೊಳಿಸಲಾಯಿತು. ಅದಕ್ಕೆ ಮುಂಚೆ ಕಾನೂನು ಪ್ರಕಾರ ಅರ್ಜಿದಾರರಿಗೆ ಸೂಕ್ತ ಸೂಚನೆಯನ್ನು ಸಹ ಕೊಡಲಾಗಿದೆ.

ಆ) ಕಳೆದ ವರ್ಷ ಮೇ ತಿಂಗಳಲ್ಲಿ ಮೈಸೂರು ತಾಲ್ಲೂಕಿನ ಹರಿಜನ ಗ್ರಾಮದಲ್ಲಿ ಸವರ್ಣೀಯರು ಮತ್ತು ಹರಿಜನರಿಗೂ ಸಹ ದ್ವೇಷ ಬೆಳೆದು ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿತ್ತು. ಶಾಂತಿ ಪಾಲನೆಗಾಗಿ ವಿಶೇಷ ಪೋಲೀಸ್ ವ್ಯವಸ್ಥೆಯನ್ನು ಮಾಡಲಾಗಿತ್ತು. ಮತ್ತು ಹಿರಿಯ ಪೋಲೀಸ್ ಅಧಿಕಾರಿಗಳೂ ಸಹಾ ಆ ಊರಿನಲ್ಲಿ ತಂಗಿದ್ದರು ೬-೫-೧೯೮೭ ರಂದು ಶ್ರೀಮತಿ ಮಾರಮ್ಮ ಎಂಬುವರು ಪೋಲೀಸ್ ಠಾಣೆಯಲ್ಲಿ ಹಾಜರಾಗಿ ೫-೫-೧೯೮೭ ರಂದು ಸಂಜೆ ೬ ಗಂಟೆಯ ವೇಳೆಯಲ್ಲಿ ಅದೇ ಊರಿನ ಶಂಕರ್ ಮತ್ತು ಇತರ ೫ ಜನರು ತಾನು ದಾರಿಯಲ್ಲಿ ಬರುತ್ತಿದ್ದಾಗ ತನ್ನ ಜಾತಿಯನ್ನು ಹೀಯಾಳಿಸಿ ಬೈದು ತನ್ನ ಮಾನ ಭಂಗ ಮಾಡಲು ಪ್ರಯತ್ನಿಸಿದರು ಎಂದು ದೂರನ್ನು ಕೊಟ್ಟರು. ಆ ದೂರಿನ ಮೇಲೆ ಮೈಸೂರು ಸೌತ್ ಪೋಲೀಸ್ ಠಾಣೆಯಲ್ಲಿ ಅಪರಾಧ ಕ್ರಮ ಸಂಖ್ಯೆ ೯೮/೮೭ ಭಾ. ದಂ. ಸಂ ೫೫೪ ಮತ್ತು ನಾಗರೀಕ ಹಕ್ಕು ರಕ್ಷಣಾ ಕಾಯಿದೆ ಕಲಂ ೭(೩) ಪ್ರಕಾರ ಪ್ರಕರಣವನ್ನು ದಾಖಲು ಮಾಡಿಕೊಂಡು ತಪಾಸಣೆ ಮಾಡಲಾಯಿತು. ದೂರಿನ ಬಗ್ಗೆ ಸಾಕ್ಷಿ

ಆಧಾರಗಳು ಇಲ್ಲದಿದ್ದರಿಂದ ೧೭-೧೧-೧೯೮೭ ರಂದು 'ಬಿ' ಅಂತಿಮ ವರದಿಯನ್ನು ಕೊಟ್ಟು ತನಿಖೆಯನ್ನು ಮುಕ್ತಾಯ ಮಾಡಲಾಯಿತು. ಇದರ ಬಗ್ಗೆ ಕಾನೂನು ಪ್ರಕಾರ ಫಿರ್ಯಾದಿಗೆ ಸೂಚನೆಯನ್ನು ಕೊಡಲಾಗಿತ್ತು.

೪) ಮೇಲೆ ಹೇಳಿದಂತೆ ಈ ಎರಡು ನಿರ್ದಿಷ್ಟ ಪ್ರಕರಣಗಳಲ್ಲಿ ಸಾಕ್ಷ್ಯಾಧಾರಗಳು ಇಲ್ಲದಿದ್ದುದರಿಂದ ಪೋಲೀಸರು ಸೂಕ್ತ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ ಮತ್ತು ಈ ಕ್ರಮದಿಂದ ಅತೃಪ್ತಿ ಹೊಂದಿದ ಹಲವರು ಇದರ ಬಗ್ಗೆ ಅರ್ಜಿಗಳನ್ನು ಸಲ್ಲಿಸಿದ್ದು ಅವನ್ನು ಉನ್ನತ ಮಟ್ಟದಲ್ಲಿ ಪರಿಶೀಲಿಸಿ ಆ ದೂರಿನಲ್ಲಿ ಸತ್ಯಾಂಶಗಳು ಇಲ್ಲವೆಂದು ವರದಿಯಾಗಿದೆ.

೧-೦೦ ಪಿ. ಎಂ.

೧೨) ಬಳ್ಳಾರಿ ಜಿಲ್ಲೆಗೆ ಡಿ. ಸಿ. ಹೆಚ್. ೫೨ ಹತ್ತಿ ಬೀಜವನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಮನವಿ

ಶ್ರೀ ಸಿ. ಎಂ. ರೇವಣಸಿದ್ದಯ್ಯ.— ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಗೆ ಡಿ. ಸಿ. ಹೆಚ್. ೫೨ ಹತ್ತಿ ಬೀಜ ಕೇವಲ ೫೦ ಕ್ವಿಂಟಾಲ್ ಒದಗಿಸಿರುವುದು ಏನೂ ಸಾಲದು. ತುಂಗಭದ್ರ ಜಲಾಶಯದ ಅಡಿಯಲ್ಲಿ ವಾಂಗಾರಿ ಬೆಳೆಯಲ್ಲಿ ಸುಮಾರು ೬೦ ಸಾವಿರ ಎಕರೆ ಮತ್ತು ಮಳೆ ಆಸರೆಯಲ್ಲಿ ೩೦ ಸಾವಿರ ಎಕರೆ ಒಟ್ಟು ಸುಮಾರು ೯೦ ಸಾವಿರ ಎಕರೆಯಲ್ಲಿ ಡಿ. ಸಿ. ಹೆಚ್. ೫೨ ಹತ್ತಿ ಬೆಳೆ ಅನಿವಾರ್ಯ ಬೆಳೆ ಮಾಡುವುದುಂಟು. ೯೦ ಸಾವಿರ ಎಕರೆಗೆ ಕನಿಷ್ಠ ೬೦೦ ಕ್ವಿಂಟಾಲ್ ಹತ್ತಿ ಬೀಜದ ಅಗತ್ಯ ಇದೆ ಇಷ್ಟನ್ನು ಒದಗಿಸತಕ್ಕದ್ದು.

ಇದೇ ಸಂದರ್ಭದಲ್ಲಿ ಧಾರವಾಡ ಜಿಲ್ಲೆಗೆ ೫೦೦ ಕ್ವಿಂಟಾಲ್, ಚಿತ್ರದುರ್ಗಕ್ಕೆ ೨೦೦ ಕ್ವಿಂಟಾಲ್ ಡಿ. ಸಿ ಹೆಚ್. ೫೨ ಕೊಟ್ಟಿರುವುದು ಸರಿಯಷ್ಟೆ. ಇದೇ ಲೆಕ್ಕಾಚಾರದಲ್ಲಿ ಬಳ್ಳಾರಿಗೂ ಕನಿಷ್ಠ ೫೨೦ ಕ್ವಿಂಟಾಲ್ ಬೀಜವನ್ನಾದರೂ ಕೊಡಲು ಈ ಮೂಲಕ ಆಗ್ರಹ ಪಡಿಸುತ್ತೇನೆ. ಮಾನ್ಯ ಕೃಷಿ ಸಚಿವರು ಪರಿಶೀಲಿಸಿ ತೀರ್ಮಾನಿಸಲಿ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ಹಾಗೆ ಹತ್ತಿಗೆ ಬೆಳೆಗೆ ತೀರಾ ಹೆಚ್ಚು ದರ ಬಂದು ರಾಜ್ಯದ ಎಲ್ಲ ಭಾಗಗಳಲ್ಲಿ ರೈತರು ಹತ್ತಿ ಬೆಳೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ನಮ್ಮ ಬೀಜ ನಿಗಮದಿಂದ ಬೀಜದ ಕೊರತೆ ಇದೆ. ಅದು ನಿಜ. ಬಳ್ಳಾರಿ ಜಿಲ್ಲೆಗೆ ಕೇವಲ ೫೭ ಕ್ವಿಂಟಾಲ್ ಕೊಡಬೇಕಾಗಿದೆ ಆ ಪೈಕಿ ಅಲ್ಲಿಗೆ ೫೭.೬೨ ರಷ್ಟು ಅಲಾಟ್ ಮಾಡಿದ್ದೇವೆ. ಮಾನ್ಯ ರೇವಣಸಿದ್ದಯ್ಯನವರು ಹೇಳಿದ ಹಾಗೆ ಡಿಮಾಂಡ್ ಜಾಸ್ತಿ ಆದುದು ನಿಜ. ಆದುದರಿಂದ ಎಷ್ಟು ಬೀಜ ಹೆಚ್ಚು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬೇರೆ ಬೇರೆ ರಾಜ್ಯಗಳಿಂದ ಮಹಾರಾಷ್ಟ್ರ ಮತ್ತು ಗುಜರಾತ್ ನಿಂದ ಸರ್ಟಿಫೈಡ್ ಸೀಡ್ಸ್ ಬರಬೇಕಾಗಿದೆ. ಪ್ರೈವೇಟ್ ಕಂಪನಿಯವರಿಗೂ ಸಹ ಇದರ ಬಗ್ಗೆ ಪರವಾನಗಿಯನ್ನು ಕೊಟ್ಟಿದ್ದೇವೆ. ಅಲ್ಲಿಂದ ಸರ್ಟಿಫೈಡ್ ಸೀಡ್ಸ್ ಡಿ ಸಿ. ಹೆಚ್. ೫೨ ಬಂದ ನಂತರ ಬಳ್ಳಾರಿ ಜಿಲ್ಲೆಗೆ ಬೀಜವನ್ನು ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

೧೩) ಕೇರಳದ ಗಡಿಯಾದ ಮಾವುಕುಟ್ಟದಲ್ಲಿ ಗೇರು ಬೀಜ ವ್ಯಾಪಾರಕ್ಕೆ ಶೆಡ್ ಹಾಕಲು ಪರವಾನಿಗೆ ನೀಡುವ ಕುರಿತು

ಶ್ರೀ ಡಿ. ಎ ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕೇರಳದ ಗಡಿಯಾದ ಮಾವುಕುಟ್ಟದಲ್ಲಿ ಪ್ರತಿವರ್ಷ ಫೆಬ್ರುವರಿಯಿಂದ ಮೇ ತಿಂಗಳ ತನಕ ಗೇರು ಬೀಜ ವ್ಯಾಪಾರವಾಗುತ್ತದೆ. ಕೇರಳದಿಂದ ಬಂದ ಗೇರು ಬೀಜವನ್ನು ವ್ಯಾಪಾರಸ್ಥರು ಖರೀದಿ ಮಾಡಿ ತಮಿಳುನಾಡಿನಲ್ಲಿ ಮಾರಾಟ ಮಾಡುತ್ತಾರೆ. ಈತನಕ ಅಲ್ಲಿ ವ್ಯಾಪಾರ ಮಾಡಲು ಅರಣ್ಯ ಇಲಾಖೆಯ ಅಧಿಕಾರಿಯಾದ ಡಿ ಎಫ್. ಓ. ರವರು ಷೆಡ್ ಹಾಕಲು ಹುಕುಂ ಕೊಡುತ್ತಿದ್ದರು, ಈ ವ್ಯಾಪಾರಿಯಿಂದ ಕರ್ನಾಟಕ ಸರ್ಕಾರದಲ್ಲಿ ಸುಮಾರು ೮೦ ಲಕ್ಷದಿಂದ